# ಕುವೆಂಪು ವಿಶ್ವವಿದ್ಯಾಲಯ

ನಿರ್ದೇಶಕರ ಕಾರ್ಯಾಲಯ,

ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನ ಸಹ್ಯಾದ್ರಿ,ಶಂಕರಘಟ್ಟ – 577451, ಶಿವಮೊಗ್ಗ ಜಿಲ್ಲೆ,ಕರ್ನಾಟಕ ದೂರವಾಣಿ: 08282 256370, 256246


## ಆದೇಶ

ವಿಷಯ:– ದೂರ ಶಿಕ್ಷಣ ನಿರ್ದೇಶನಾಲಯದ ಅಭಿವೃದ್ಧಿ ನಿಧಿ (DDE Development Fund) ಯನ್ನು ಯುಜಿ / ಪಿಜಿ. ಪ್ರಥಮ ವರ್ಷದ ವಿದ್ಯಾರ್ಥಿಗಳ ಜೊತೆ ದ್ವಿತೀಯ, ತೃತೀಯ (ಯುಜಿ), ದ್ವಿತೀಯ (ಪಿಜಿ), ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಕುರಿತು.

ಉಲ್ಲೇಖ: 1 ದಿನಾಂಕ 17.03.2017 ರಂದು ನಡೆದ ದೂರ ಶಿಕ್ಷಣ ನಿರ್ದೇಶನಾಲಯದ ಮೇಲ್ವಿಚಾರಣಾ ಸಮಿತಿ ಸಭಾ ನಿರ್ಣಯ

2. ದಿನಾಂಕ 11–09–2018 ರಂದು ನಡೆದ ದೂರ ಶಿಕ್ಷಣ ನಿರ್ದೇಶನಾಲಯದ ಮೇಲ್ವಿಚಾರಣಾ ಸಮಿತಿ ಸಭಾ ನಿರ್ಣಯ.
3. ದಿನಾಂಕ 29.09.2018 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
4 ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ :01–12–2018

**ಪ್ರಸ್ತಾವನೆ :–**

ದಿನಾಂಕ 17.03.2017 ರಂದು ನಡೆದ ದೂರ ಶಿಕ್ಷಣ ನಿರ್ದೇಶನಾಲಯದ ಮೇಲ್ವಿಚಾರಣಾ ಸಮಿತಿ ಸಭಾ ನಿರ್ಣಯದನ್ವಯ ದೂರ ಶಿಕ್ಷಣ ನಿರ್ದೇಶನಾಲಯದ ಅಭಿವೃದ್ಧಿ ನಿಧಿ (DDE Development Fund) ಯನ್ನು 2016–17 ನೇ ಶೈಕ್ಷಣಿಕ ಸಾಲಿನಿಂದ ನೇರವಾಗಿ ಹಾಗೂ ಅಧ್ಯಯನ ಕೇಂದ್ರಗಳ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ರೂ. 250/– ಗಳನ್ನು ಪ್ರಥಮ ವರ್ಷದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಮಾತ್ರ ಸಂಗ್ರಹಿಸಲಾಗುತ್ತಿತ್ತು. ಸದರಿ ಅಭಿವೃದ್ಧಿ ನಿಧಿಯಿಂದ ರೂ. 200.00 ನ್ನು ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಂಡು ರೂ. 50.00 ಗಳನ್ನು ಅಧ್ಯಯನ ಕೇಂದ್ರಗಳಿಗೆ ಷೇರು ಮೊತ್ತದ ಜೊತೆ ಪಾವತಿಸಲಾಗುತ್ತಿದೆ.

ಆದರೆ, ದಿನಾಂಕ 11–09–2018ರಂದು ನಡೆದ ಮೇಲ್ವಿಚಾರಣಾ ಸಮಿತಿ ಸಭೆ ಹಾಗೂ ದಿನಾಂಕ 29.09.2018 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ದೂರ ಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಅಭಿವೃದ್ಧಿ ನಿಧಿಯನ್ನು 2018–19 ನೇ ಸಾಲಿನಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳ ಜೊತೆಗೆ ದ್ವಿತೀಯ, ತೃತೀಯ (ಯುಜಿ) ಹಾಗೂ ದ್ವಿತೀಯ (ಪಿಜಿ), ವಿದ್ಯಾರ್ಥಿಗಳಿಂದಲೂ ಸಹ ರೂ. 250.00 (ರೂಪಾಯಿ ಇನ್ನೂರಾ ಐವತ್ತು ಮಾತ್ರ) ಗಳನ್ನು ಸಂಗ್ರಹಿಸುವ ಕುರಿತಂತೆ ನಿರ್ಣಯ ಕೈಗೊಳ್ಳಲಾಗಿದ್ದು, ಈ ಸಂಬಂಧ ಉಲ್ಲೇಖ (4) ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶ.

**ಆದೇಶ ಸಂಖ್ಯೆ: ಕುವಿ:ದೂಶಿನಿ–2:2018–19/** 2584 **ದಿನಾಂಕ 03.12.2018**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ ಉಲ್ಲೇಖ (2) ರ ಮೇಲ್ವಿಚಾರಣಾ ಸಮಿತಿ ಹಾಗೂ ಉಲ್ಲೇಖ (03) ರ ಸಿಂಡಿಕೇಟ್ ನಿರ್ಣಯದ ಮೇರೆಗೆ 2018–19 ನೇ ಸಾಲಿನಿಂದ ನೇರವಾಗಿ ಹಾಗೂ ಅಧ್ಯಯನ ಕೇಂದ್ರಗಳ ಮೂಲಕ ಪ್ರವೇಶ ಪಡೆಯಲಿರುವ ದೂರ ಶಿಕ್ಷಣ ನಿರ್ದೇಶನಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳ ಜೊತೆಗೆ ದ್ವಿತೀಯ/ತೃತೀಯ (ಯುಜಿ), ದ್ವಿತೀಯ (ಪಿಜಿ), ವಿದ್ಯಾರ್ಥಿಗಳಿಂದ ದೂರ ಶಿಕ್ಷಣ ನಿರ್ದೇಶನಾಲಯದ ಅಭಿವೃದ್ಧಿ ನಿಧಿ (DDE Development Fun) ರೂ. 250.00 (ರೂಪಾಯಿ ಇನ್ನೂರಾ ಐವತ್ತು ಮಾತ್ರ) ಗಳನ್ನು ಸಂಗ್ರಹಿಸಲು ಆದೇಶಿಸಲಾಗಿದೆ.

ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಅಭಿವೃದ್ಧಿ ನಿಧಿಯಲ್ಲಿ ರೂ. 200.00 ಗಳನ್ನು ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಂಡು ರೂ. 50.00 (ರೂಪಾಯಿ ಐವತ್ತು ಮಾತ್ರ) ಗಳನ್ನು ಅಧ್ಯಯನ ಕೇಂದ್ರಗಳಿಗೆ ಷೇರು ಮೊತ್ತದ ಜೊತೆಗೆ ಪಾವತಿಸಲು ಅನುಮತಿಸಿದೆ.

ಆದೇಶದ ಮೇರೆಗೆ,

ನಿರ್ದೇಶಕರು

ನಿರ್ದೇಶಕರು
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ – 577 451

ಗೆ :

1. ಘನ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶ ಹಿನ್ನೆಲೆಯಲ್ಲಿ ಅನುಮತಿ ಪಡೆದ ಎಲ್ಲಾ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳಿಗೆ.

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
2. ಅಪರ ನಿರ್ದೇಶಕರು, ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ, ಲೆಕ್ಕಪರಿಶೋಧನಾ ವರ್ತುಲ, ಕಂಟ್ರಿಕ್ಲಬ್ ರಸ್ತೆ, ವಿದ್ಯಾನಗರ, ಶಿವಮೊಗ್ಗ – ಮಾಹಿತಿಗಾಗಿ.
3. ಆಪ್ತ ಸಹಾಯಕರು – ಮಾನ್ಯ ಕುಲಪತಿಗಳು, ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ), ನಿರ್ದೇಶಕರು (ದೂಶಿನಿ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಮಾಹಿತಿಗಾಗಿ.
4. ಸಂಚಾಲಕರು, KUDDE ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗೆದ್ದಲಹಳ್ಳಿ, NH -04 ಕಡೂರು
5. ಸಂಚಾಲಕರು, KUDDE ಸ್ನಾತಕೋತ್ತರ ಅಧ್ಯಯನ ಕೇಂದ್ರ, ಐಡಿಎಸ್‌ಜಿ ಕಾಲೇಜು ಆವರಣ, ಜ್ಯೋತಿ ನಗರ, ಚಿಕ್ಕಮಗಳೂರು
6. ಅಧೀಕ್ಷಕರು (1) ಮತ್ತು (2), ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ
7. ಎಲ್ಲಾ ವಿಷಯ ನಿರ್ವಾಹಕರು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ
8. ವಿಷಯ ನಿರ್ವಾಹಕರು, ಕಂಪ್ಯೂಟರ್ ವಿಭಾಗ, ದೂರ ಶಿಕ್ಷಣ ನಿರ್ದೇಶನಾಲಯ, ಶ ಸಂಪರ್ಕಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ
9. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ
10. ಎಲ್ಲಾ ಸಂಶೋಧನಾ ಮತ್ತು ಬೋಧನಾ ಸಹಾಯಕರು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ
11. ವಿಶ್ವವಿದ್ಯಾಲಯದ ಎಲ್ಲಾ ಪ್ರಕಟಣಾ ಫಲಕಗಳಿಗೆ.
12. ಕಛೇರಿ ಪ್ರತಿ.

...end of the order...